# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಒ ಎಸ್ 25/2012

| | | | | |
|---|---|---|---|---|
| 01 | ಹೆಸರು | ಮನೋಹರ ಬಿ ಎನ್ | ಸಿ ಡಬ್ಲೂ | **1** |
| 02 | ತಂದೆಯ ಹೆಸರು | ನಂಜುಂಡೇಗೌಡ | | |
| 03 | ವಯಸ್ಸು | 43 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ಸರ್ಕಾರಿ ಭೂಮಾಪಕರು | 04.09.2025 | |
| 05 | ಊರು | ಟಿ ನರಸೀಪುರ ತಾಲ್ಲೂಕು | | |

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ**

ನಾನು ಫೆಬ್ರವರಿ 2021 ರಿಂದ ಜುಲೈ 2025 ರವರೆಗೂ ಟಿ ನರಸೀಪುರ ತಾಲ್ಲೂಕು ಕಚೇರಿಯಲ್ಲಿ ಭೂಮಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ದಾವೆಯಲ್ಲಿ ನಾನು ನ್ಯಾಯಾಲಯದ ಆದೇಶದಂತೆ ನಿಯೋಗಿ ವರದಿ ಸಲ್ಲಿಸಿಸುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ಮತ್ತು ಲಗತ್ತುಗಳನ್ನು ನೋಡಿ ಗುರುತಿಸಿದ್ದು ಅದನ್ನು **ನಿ ಸಿ 1** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಎನ್ ವಕೀಲರಿಂದಃ**

ನಾನು ಸ್ಥಳ ಪರಿಶೀಲನೆ ಮಾಡುವ ಮೊದಲು ಪಕ್ಷಗಾರರಿಗೆ ನೋಟಿಸು ಕೊಟ್ಟಿರುತ್ತೇನೆ. ನಾನು ಉಭಯ ಪಕ್ಷಗಾರರು ಸಲ್ಲಿಸಿದ್ದ ಸೂಚನಾಪತ್ರವನ್ನು ಗಮನಿಸಿರುತ್ತೇನೆ. ನಾನು ಸ್ಥಳ ಪರಿಶೀಲನೆ ಮಾಡುವ ಮೊದಲು ಕಂದಾಯ ಇಲಾಖೆಯಿಂದ ಗ್ರಾಮ ನಕ್ಷೆ, ಆರ್ ಆರ್ ಪಕ್ಕಾ ಹಿಸ್ಸಾ ಟಿಪ್ಪಣಿ ಮತ್ತು ಆಕಾರ ಬಂದ್ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ವಾದಿಯ ಸೂಚನಾ ಪತ್ರದಲ್ಲಿ ಸ.ನಂ.62 ರ ವಿಸ್ತೀರ್ಣದ ಒಳಗಡೆ ದಾವಾ ಸ್ವತ್ತು ಅಸ್ತಿತ್ವದಲ್ಲಿದೆಯೋ ಇಲ್ಲವೋ ಎಂದು ಗುರುತಿಸುವಂತೆ ಕೇಳಲಾಗಿತ್ತು ಎಂದರೆ ಸರಿ. ಅದೇ ರೀತಿ ವಾದಿಯ ಸೂಚನಾ ಪತ್ರದಲ್ಲಿ ಸ.ನಂ.62 ರ ಚಕ್ಕುಬಂದಿಯನ್ನು ನಮೂದಿಸುವಂತೆ ಕೇಳಲಾಗಿತ್ತು ಎಂದರೆ ಸರಿ.

ದಾವಾ ಸ್ವತ್ತು ಸ.ನಂ.62/1 ರಲ್ಲಿ ಅಸ್ತಿತ್ವದಲ್ಲಿದೆ. ಸದರಿ ಸ.ನಂ.62/1 ಕ್ಕೆ ನಾನು ಪ್ರತ್ಯೇಕ ಚಕ್ಕುಬಂದಿಯನ್ನು ನಮೂದಿಸಿರುವುದಿಲ್ಲ. ಸೂಚನಾ ಪತ್ರದಂತೆ ಸ.ನಂ.62 ರ ಆಸ್ತಿಯನ್ನು ಅಳತೆ ಮಾಡಿ ಅದಕ್ಕೆ ಚಕ್ಕುಬಂದಿಯನ್ನು ನಮೂದಿಸಿ ನಕ್ಷೆ ತಯಾರಿಸಿ ಕೊಡಬೇಕಾಗಿ ಕೋರಲಾಗಿತ್ತು ಎಂದರೆ ಸರಿ.

ಸ.ನಂ.62ರ ಒಟ್ಟು ವಿಸ್ತೀರ್ಣವನ್ನು ನಾನು ನಮೂದಿಸಿರುವುದಿಲ್ಲ, ಸಾಕ್ಷಿ ಮುಂದುವರಿದು ಸ.ನಂ.62ರ ಆಸ್ತಿಯು ಪೋಡಿಯಾಗಿ ಸ.ನಂ.62/1 ರಿಂದ 62/4 ರವರೆಗೂ ವಿಂಗಡಣೆಯಾಗಿ ಹೊಸ ಸರ್ವೆ ನಂಬರ್ ಕೊಡಲಾಗಿದೆ ಎಂದು ನುಡಿಯುತ್ತಾರೆ. ನನ್ನ ವರದಿಯಲ್ಲಿ ನಾನು ಸ.ನಂ.62/1 ರಿಂದ ಸ.ನಂ.62/4ರ ಆಸ್ತಿಗಳ ಪ್ರತ್ಯೇಕ ವಿಸ್ತೀರ್ಣಗಳನ್ನು ಉಲ್ಲೇಖಿಸಿರುವುದಿಲ್ಲ. ಅದೇ ರೀತಿ ನಾನು ಸ.ನಂ.62/1 ರಿಂದ ಸ.ನಂ.62/4ರ ಆಸ್ತಿಗಳ ಪ್ರತ್ಯೇಕ ಚಕ್ಕುಬಂದಿಗಳನ್ನು ಉಲ್ಲೇಖಿಸಿರುವುದಿಲ್ಲ. ನಾನು ಸಲ್ಲಿಸಿರುವ ನಕಾಶೆಯಲ್ಲಿ ಉಲ್ಲೇಖಿಸಿರುವ ಕಾಂಕ್ರೀಟ್ ರಸ್ತೆ ದಾವಾ ಸ್ವತ್ತಿನ ಉತ್ತರಕ್ಕೆ ಇರುತ್ತದೆ ಎಂದರೆ ಸರಿ. ದಾವಾ ಚಕ್ಕುಬಂದಿಯ ಪ್ರಕಾರ ಕೂಡಾ ದಾವಾ ಸ್ವತ್ತಿನ ಉತ್ತರಕ್ಕೆ ಕಾಂಕ್ರೀಟ್ ರಸ್ತೆ ಇರುವುದಾಗಿ ತೋರಿಸಲಾಗಿದೆ ಎಂದರೆ ಸರಿ. ಸ.ನಂ.62/1ರ ಆಸ್ತಿ ಭೂಪರಿವರ್ತನೆಗೊಂಡಿರುವುದಿಲ್ಲ ಎಂದು ನಾನು ಉಲ್ಲೇಖಿಸಿದ್ದು, ಆದರೆ ಆ ಬಗ್ಗೆ ಯಾವುದೇ ಸರ್ಕಾರದ ಆದೇಶ ಇರುವುದಿಲ್ಲ.

**<u>ಪಾಟೀ ಸವಾಲುಃಪ್ರತಿವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ</u>**

ನಾನು ಪ್ರತಿವಾದಿಗಳು ಸಲ್ಲಿಸಿರುವ ಸೂಚನಾ ಪತ್ರವನ್ನು ಓದಿರುತ್ತೇನೆ. ನಾನು ನ್ಯಾಯಾಲಯದಿಂದ ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳ ನಕಲನ್ನು ಪಡೆದುಕೊಂಡಿರುತ್ತೇನೆ. ಕಂದಾಯ ಇಲಾಖೆಯ ದಾಖಲೆಗಳಂತೆ ಸ.ನಂ.62ರಲ್ಲಿ 1 ಎಕರೆ 24 ಗುಂಟೆ ಆಸ್ತಿಯು ಹಾಗೆಯೇ ಮುಂದುವರಿಯುತ್ತಿದೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಆದರೆ ಸದರಿ ಆಸ್ತಿಯು ಪೋಡಿಯಾಗಿ 62/1 ರಿಂದ 62/4 ಎಂದು ವಿಂಗಡಣೆಗೊಂಡಿದೆ ಎಂದು ನುಡಿಯುತ್ತಾರೆ. ಸದರಿ ಸ.ನಂ. 62ರ ಆಸ್ತಿಯು ಕಂದಾಯ ಇಲಾಖೆಯ ಪಹಣಿಪತ್ರಿಕೆಯಲ್ಲಿ ಹಾಗೆಯೇ ಮುಂದುವರೆದಿರುತ್ತದೆ. ಸದರಿ ಸ.ನಂ.62ರ ಪೈಕಿ 1 ಎಕರೆ 24 ಗುಂಟೆ ಇಂದಿಗೂ ಪ್ರತಿವಾದಿ ನಂಜಮಣಿ ಹೆಸರಿನಲ್ಲಿದೆ ಎಂದರೆ ಸರಿ. ಸ.ನಂ. 62ರ ಒಟ್ಟು ವಿಸ್ತೀರ್ಣ 5 ಎಕರೆ 11 ಗುಂಟೆ ಮತ್ತು 6 ಗುಂಟೆ ಖರಾಬು ಇರುತ್ತದೆ ಎಂದರೆ ಸರಿ. ನಮ್ಮ ಸರ್ವೆ ಇಲಾಖೆಯ ದಾಖಲೆಗಳ ಪ್ರಕಾರ ಸದರಿ ಸ.ನಂ.62ರ ಆಸ್ತಿಯು ಎರಡು ಬಾರಿ ಪೋಡಿಯಾಗಿರುತ್ತದೆ. ಪೋಡಿ ಮಾಡುವ ಪೂರ್ವದಲ್ಲಿ ಪಹಣಿ ಪತ್ರಿಕೆಯಲ್ಲಿ ಕಂಡುಬರುವ ಹಿಡುವಳಿದಾರರಿಗೆ ತಿಳುವಳಿಕೆ ಪತ್ರ ಕಳುಹಿಸಬೇಕು ಎಂದರೆ ಸರಿ. ಆ ರೀತಿ ನಮ್ಮ ಇಲಾಖೆಯಿಂದ ಯಾರಿಗೂ ನೋಟಿಸು ಜಾರಿಗೊಂಡಿಲ್ಲ ಎಂದರೆ ಸರಿಯಲ್ಲ. ನಂಜಮಣಿ ಅವರ 1 ಎಕರೆ 24 ಗುಂಟೆ ಜಮೀನನ್ನು ಅಳತೆ ಮಾಡಿ ಅದರ ಚಕ್ಕುಬಂದಿ ತೋರಿಸುವಂತೆ ಸೂಚನಾ ಪತ್ರದಲ್ಲಿ ಕೋರಲಾಗಿತ್ತು ಎಂದರೆ ಸರಿ. ನನ್ನ ವರದಿಯಲ್ಲಿ ಸದರಿ ಸೂಚನೆಯಂತೆ ಮಾಹಿತಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯ ಜಮೀನನ್ನು ನಾನು ಅಳತೆ ಮಾಡಿ ಚಕ್ಕುಬಂದಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯು ತನ್ನ ಆಸ್ತಿಯ ಪಹಣಿ ಪತ್ರಿಕೆಯನ್ನು ಇಂಡೀಕರಣಗೊಳಿಸಿದ ನಂತರ ಹದ್ದುಬಸ್ತು ಮಾಡಿಸಿದ ನಂತರವೇ ಅವರ ಆಸ್ತಿಯ ಚಕ್ಕುಬಂದಿಯನ್ನು ಗುರುತಿಸಲು ಸಾಧ್ಯ ಎಂದು ನುಡಿಯುತ್ತಾರೆ.

ವಾದಿಯು ದಾವಾ ಎ, ಬಿ, ಸಿ ಷೆಡ್ಯೂಲ್ ಆಸ್ತಿಗಳು ಸರ್ವೆ ನಂಬರ್ 62 ರ ಒಳಗಡೆ ಬರುತ್ತದೆಯೋ ಇಲ್ಲವೋ ಎಂದು ಕೇಳಿದ್ದು ಅದನ್ನು ನಾನು ಸ್ಥಳ ತನಿಖೆ ಮಾಡಿ ವರದಿ ಕೊಟ್ಟಿರುತ್ತೇನೆ. ನಾನು ದಾವಾ ಎ, ಬಿ, ಸಿ ಷೆಡ್ಯೂಲ್ ಆಸ್ತಿಗಳನ್ನು ನನ್ನ ನಕಾಶೆಯಲ್ಲಿ ಕಾಣಿಸಿರುವುದಿಲ್ಲ. ನಿವೇಶನಗಳು ಪಂಚಾಯಿತಿಯ ವ್ಯಾಪ್ತಿಗೆ ಬರುವುದರಿಂದ ಅದನ್ನು ನಮ್ಮ ಇಲಾಖೆ ಅಳತೆ ಮಾಡಲು ಬರುವುದಿಲ್ಲ. ನಿವೇಶನಗಳು ಆದ ನಂತರ ಸರ್ವೆ ನಂಬರ್ ರದ್ದು ಗೊಳಿಸಿ ಪಂಚಾಯಿತಿ ಖಾತೆ ನಂಬರ್ ಕೊಡಲಾಗುತ್ತದೆ.

ನಾನು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಓದಿರುತ್ತೇನೆ. ದಾವಾ ಸ್ವತ್ತುಗಳು ಪಂಚಾಯಿತಿ ವ್ಯಾಪ್ತಿಗೆ ಬರುವ ನಿವೇಶನಗಳು ಇರುತ್ತವೆ ಎಂದರೆ ಸರಿ. ದಾವಾ ನಿವೇಶನಗಳು ಸ.ನಂ.62/1ರ ಆಸ್ತಿಯ ಗಡಿಯ ವಿಸ್ತೀರ್ಣದ ಒಳಗಡೆ ಇರುತ್ತದೆ. ಸ.ನಂ.62/1ರ ಆಸ್ತಿಯ ವಿಸ್ತೀರ್ಣ ಆಕಾರ ಬಂದ್ ನಂತರ 3 ಎಕರೆ 9 ಗುಂಟೆ ಇರುತ್ತದೆ. ಉಳಿಕೆ ವಿಸ್ತೀರ್ಣವು ಸ.ನಂ.62/2 ರಿಂದ 62/4 ರ ಆಸ್ತಿಗಳಲ್ಲಿ ಹಂಚಿಕೆ ಆಗಿರುತ್ತದೆ. ಸ.ನಂ.62/1 ರಿಂದ 62/4ರಲ್ಲಿ ಒಟ್ಟು 5 ಎಕರೆ 17 ಗುಂಟೆ ಇರುತ್ತದೆ. ಸ.ನಂ.62/2, 62/3 ಮತ್ತು 62/4ರ ಪ್ರತ್ಯೇಕ ವಿಸ್ತೀರ್ಣ ನನಗೆ ಹೇಳಲಾಗುವುದಿಲ್ಲ. ನಾನು ಸ್ಥಳಕ್ಕೂ ಹೋಗಿಲ್ಲ ಮತ್ತು ಯಾವುದೇ ಅಳತೆ ಕಾರ್ಯ ಮಾಡದೇ ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.